

## ಫ್ಯಾಂಟಸಿ ಪ್ರಿಯರಿಗೆ 'ವೆನಮ್'

ಕಥಾನಾಯಕ ದುಷ್ಟರನ್ನು ಸದೆಬಡಿಯುವುದು ಸಿನಿಮಾದಲ್ಲಿ ಮಾಮೂಲು. ಆದರೆ ದುಷ್ಟರು ಬಲಾಢ್ಯರಾಗಿದ್ದಾಗ ಅವರನ್ನು ಸದೆಬಡಿಯಲು ಅತಿಮಾನುಷ ಶಕ್ತಿಯೂ ಬೇಕು. ಕಥಾನಾಯಕನ ದೇಹವನ್ನು ಪ್ರವೇಶಿಸುವ ಅತಿಮಾನುಷ ಶಕ್ತಿ ಹೇಗೆ ದುಷ್ಟರನ್ನು ಸದೆಬಡಿಯುತ್ತದೆ ಎನ್ನುವುದು 'ವೆನಮ್' ಚಿತ್ರದ ಹೈಲೈಟ್.

ಸ್ಕಾಟ್ ಹೇಜ್ ಮತ್ತು ರೀಡ್ ಸ್ಕಾಟ್ ಅಭಿನಯದ ವೆನಮ್ ಇಂಗ್ಲಿಷ್ ಮಾತ್ರವಲ್ಲ ತಮಿಳು ಮತ್ತು ತೆಲುಗು ಭಾಷೆಗಳಲ್ಲೂ ಈ ವಾರ ತೆರೆ ಕಂಡಿದೆ. ರೂಬೆನ್ ಫ್ಲೀಷರ್ ನಿರ್ದೇಶನದ ಈ ಚಿತ್ರ ಫ್ಯಾಂಟಸಿಪ್ರಿಯರಿಗೆ ಮುದ ನೀಡುವುದು ಖಚಿತ. ಬ್ಲ್ಯಾಕ್ ಪ್ಯಾಂಥರ್ ಖ್ಯಾತಿಯ ಲುಡ್‌ವಿಗ್ ಗೊರಾನ್ಸನ್ ಸಂಗೀತವಿದ್ದು, ಮ್ಯಾಥ್ಯೂ ಲಿಬೆಟಿಕ್ ಛಾಯಾಗ್ರಹಣ ಚಿತ್ರದ ಹೈಲೈಟ್. ಇಂಗ್ಲಿಷ್‌ನ ಸೂಪರ್‌ಹೀರೊ ಸೀರಿಯಲ್‌ಗಳು ಜಗತ್ತಿನಾದ್ಯಂತ ಎಲ್ಲ ದೇಶಗಳಲ್ಲೂ ವಯೋಮಾನದ ತಡೆಯಿಲ್ಲದೆ ಪ್ರೇಕ್ಷಕರನ್ನು ಆಕರ್ಷಿಸುತ್ತಿದೆ. ಸ್ಪೈಡರ್‌ಮ್ಯಾನ್ ಇದಕ್ಕೊಂದು ಸಾರ್ವಕಾಲಿಕ ಉದಾಹರಣೆ. ಅದೇ ಜಾಡಿನಲ್ಲಿ 'ವೆನಾಮ್' ಕೂಡಾ ಹೊರಬಂದಿದೆ. ಈ ಚಿತ್ರದ ಮೂಲಕ ಸೋನಿ ಪಿಕ್ಚರ್ಸ್ ಸ್ವತಂತ್ರವಾಗಿ ಸ್ಪೈಡರ್‌ಮ್ಯಾನ್ ಸೀರೀಸ್ ತರುವ ಸಾಧ್ಯತೆಯೂ ಇದೆ.



## ಇರ್ಫಾನ್ ಸಿಹಿ ಸುದ್ದಿ

ಬಾಲಿವುಡ್‌ನ ಪ್ರತಿಭಾವಂತ ನಟ ಇರ್ಫಾನ್ ಖಾನ್‌ನ ಕ್ಯಾನ್ಸರ್ ಚಿಕಿತ್ಸೆ ಲಂಡನ್ನಿನಲ್ಲಿ ಮುಂದುವರಿದಿದೆ. ಕಳೆದ ತಿಂಗಳು ನಾಲ್ಕನೇ ಸುತ್ತಿನ ಕೀಮೊಥೆರಪಿ ಆದ ಬಳಿಕ ದೈಹಿಕ ಸುಸ್ತಿನಿಂದ ಈತ ಆಸ್ಪತ್ರೆ ಸೇರಿದ್ದೂ ಸುದ್ದಿಯಾಗಿತ್ತು. ಬಲ್ಲ ಮೂಲಗಳ ಪ್ರಕಾರ ಚಿಕಿತ್ಸೆಯ ಬಳಿಕ ಇರ್ಫಾನ್ ಸಾಕಷ್ಟು ಚೇತರಿಸಿಕೊಂಡಿದ್ದಾನೆ. ಐದನೇ ಸುತ್ತಿನ ಕೀಮೊಥೆರಪಿ ಬಗ್ಗೆ ವೈದ್ಯರು ಇನ್ನಷ್ಟೇ ನಿರ್ಧಾರ ಕೈಗೊಳ್ಳಬೇಕಿದೆಯಂತೆ. ಆದರೆ ಬೇರೆ ಕ್ಯಾನ್ಸರ್ ರೋಗಿಗಳಂತೆ ಇರ್ಫಾನ್‌ನಲ್ಲಿ ತಲೆಕೂದಲು ಉದುರುವ ಲಕ್ಷಣಗಳು ಯಾವುದೂ ಕಾಣಿಸಿಲ್ಲವಂತೆ. ಅಷ್ಟರಮಟ್ಟಿಗೆ ಚಿಕಿತ್ಸೆಯನ್ನು ಆತ ಪಾಸಿಟಿವ್ ಆಗಿಯೇ ಎದುರಿಸಿದ್ದಾನೆ ಎನ್ನುವ ಸುದ್ದಿಯಿದೆ. ಮೇ ತಿಂಗಳಲ್ಲಿ ಇರ್ಫಾನ್ ತಲೆಯ ಮೇಲೊಂದು ಶಾಲು ಎಳೆದುಕೊಂಡು ಲಾರ್ಡ್ಸ್ ಮೈದಾನದಲ್ಲಿ ಇಂಗ್ಲೆಂಡ್ ಪಾಕಿಸ್ತಾನ ಪಂದ್ಯ ನೋಡುತ್ತಿರುವ ಚಿತ್ರವೂ ಪ್ರಕಟವಾಗಿತ್ತು.

ಈ ಮಧ್ಯೆ ಇರ್ಫಾನ್ ಅಭಿನಯಿಸಿದ ಬಾಂಗ್ಲಾ ದೇಶೀಯ ಸಿನಿಮಾ 'ಡೂಬ್: ನೋ ಬೆಡ್ ಆಫ್ ರೋಸಸ್' ಆ ದೇಶದಿಂದ ಅಕಾಡೆಮಿ (ಆಸ್ಕರ್) ಪ್ರಶಸ್ತಿಗೆ ಎಂಟ್ರಿ ಪಡೆದಿದೆ. ಬಾಂಗ್ಲಾದಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿದ ಈ ಚಿತ್ರ ಕಳೆದ ವರ್ಷದ ಆರಂಭದಲ್ಲಿ ವಿವಾದಕ್ಕೆ ಸಿಲುಕಿ ಬಾಂಗ್ಲಾ ಸರಕಾರದಿಂದ ನಿಷೇಧಕ್ಕೆ ಒಳಗಾಗಿತ್ತು. ವರ್ಷದ ಕೊನೆಗೆ ನಿಷೇಧ ತೆರವಾಗಿ ಬಾಂಗ್ಲಾ, ಭಾರತ, ಆಸ್ಟ್ರೇಲಿಯಾ, ಫ್ರಾನ್ಸ್‌ಗಳಲ್ಲಿ ಬಿಡುಗಡೆಯಾಗಿತ್ತು. ಈ ಚಿತ್ರದಲ್ಲಿ ಇರ್ಫಾನ್ ನಟನೆಯ ಬಗ್ಗೆಯೂ ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿದ್ದು ಆಸ್ಕರ್ ಎಂಟ್ರಿ ಆತನಿಗೆ ಸಾಕಷ್ಟು ಖುಷಿ ತಂದಿದೆಯಂತೆ.

■ ಬಿಂದು